**ಓ.ಎಸ್. ನಂ. 434/2013 ಡಿ.ಡಬ್ಲೂ-1 ಹೆಸರು - ಶಿವಣ್ಣ ಎಂ.**

**ಸಾಕ್ಷಿಯನ್ನು ದಿನಾಂಕಃ 27/07/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆಪಾಟೀ ಸವಾಲುಃ ಶ್ರೀ. ಎಸ್.ಎಸ್.ಬಿ. 11 ನೇ ಪ್ರತಿವಾದಿ ಪರ ವಕೀಲರಿಂದಃ-**

ನನ್ನ ತಾಯಿಗೆ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ ಮತ್ತು ಕಿವಿ ಸ್ವಲ್ಪ ಮಂದ. ಯಾರಾದರು ಮಾತನಾಡಿದರೆ ನನ್ನ ತಾಯಿಗೆ ಸ್ಪಷ್ಟವಾಗಿ ಕೇಳಿಸುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಸಂಬಂಧಪಟ್ಟ ವೈದ್ಯಕೀಯ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ದಾವಾ ಐಟಂ ನಂಬರ್ 1 ರಿಂದ 7 ಸ್ವತ್ತುಗಳು ವಾದಿಯರು ಮತ್ತು 11 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿಯು ನಾನು ಖರೀದಿಸಿದ ಸ್ವತ್ತು ನಂಜುಂಡನಾಯಕರ ತಂದೆಯ ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಎಷ್ಟು ಜನ ಹೆಂಡತಿಯರು ಮತ್ತು ಮಕ್ಕಳು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾವು ಜಮೀನನ್ನು ಖರೀದಿಸುವ ಕಾಲಕ್ಕೆ ಒಬ್ಬ ಹೆಂಡತಿ ಮತ್ತು ಇಬ್ಬರು ಮಕ್ಕಳು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ಇಬ್ಬರು ಹೆಂಡತಿಯರ ಹೆಸರು ಮಹದೇವಮ್ಮ ಎಂದರೆ ನನಗೆ ಗೊತ್ತಿಲ್ಲ. ಮೊದಲನೇ ಹೆಂಡತಿ ಮಹದೇವಮ್ಮ ಮಾನಸಿಕವಾಗಿ ಅಸ್ವಸ್ಥರಿದ್ದ ಕಾರಣ 1 ನೇ ಪ್ರತಿವಾದಿಯು ಮಹದೇವಮ್ಮ ಎನ್ನುವವರನ್ನು ಎರಡನೇ ಮದುವೆ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. 2 ನೇ ಹೆಂಡತಿಯ ಮಗಳೇ 11 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಕಾನೂನು ಬದ್ದ ವಾರಸುದಾರರನ್ನೆಲ್ಲಾ ಮರೆಮಾಚಿ ದಾವಾ ಐಟಂ ನಂಬರ್ 4 ಅನ್ನು ಖರೀದಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-58, 59 ಮತ್ತು ನಿಡಿ-2 ಪತ್ರಗಳನ್ನು ಈ ದಾವೆಗಳಿಗಾಗಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಒಂದು ವೇಳೆ ಸದರಿ ಪತ್ರಗಳು ಆಗಿದ್ದರು ಕೂಡ ಸದರಿ ಪತ್ರಗಳು 11 ನೇ ಪ್ರತಿವಾದಿಯನ್ನು ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ 11 ನೇ ಪ್ರತಿವಾದಿಗೆ ಭಾಗಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ಕ್ರಯಕ್ಕೆ ತೆಗೆದುಕೊಳ್ಳುವ ಸಮಯದಲ್ಲಿ 1 ನೇ ಪ್ರತಿವಾದಿಯ ಕುಟುಂಬದ ಸದಸ್ಯರ ಬಗ್ಗೆ ತಿಳಿದುಕೊಳ್ಳಲು ಸಮಸ್ಯೆ ಇತ್ತೇ ಎಂದು ಕೇಳಿದ

ಪ್ರಶ್ನೆಗೆ ಸಾಕ್ಷಿಯು ಮೊದಲ ಹೆಂಡತಿ ಮತ್ತು ಅವರ ಮಕ್ಕಳ ಸಹಮತದೊಂದಿಗೆ ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಖಾತೆಯು 1 ನೇ ಪ್ರತಿವಾದಿಯ ಹೆಸರಿಗೆ ಪೌತಿ ಖಾತೆ ಆಧಾರದ ಮೇಲೆ ಆಗಿದೆ ಎಂದರೆ ನಾವು ಖರೀದಿಸಿರುವ ಸ್ವತ್ತು 1 ನೇ ಪ್ರತಿವಾದಿಯ ತಂದೆಯ ಹೆಸರಿನಿಂದ 1 ನೇ ಪ್ರತಿವಾದಿಗೆ ಆಗಿದೆ ಎಂದು ನುಡಿಯುತ್ತಾರೆ. 11 ನೇ ಪ್ರತಿವಾದಿಯ ಭಾಗಂಶದ ಹಕ್ಕನ್ನು ನಷ್ಟಪಡಿಸುವ ಸಲುವಾಗಿ ಈ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿಯ ಭಾಗಂಶದ ಹಕ್ಕನ್ನು ನಷ್ಟಪಡಿಸುವ ಸಲುವಾಗಿ ಕ್ರಯ ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**